# ಬಾಹ್ಯಾಕಾಶ ಕಾರ್ಯಕ್ರಮಗಳು ಸಮಾಜಮುಖಿ

**ವಿಕ ಸುದ್ದಿಲೋಕ** ಬೆಂಗಳೂರು

ಪ್ರಸ್ತುತ ಬಾಹ್ಯಾಕಾಶಕ್ಕೆ ಸಂಬಂಧಿಸಿ ನಡೆಯುತ್ತಿರುವ ಕಾರ್ಯಕ್ರಮಗಳು ಕೇವಲ ಸಂಶೋಧನೆಗೆ ಸೀಮಿತವಾಗಿಲ್ಲ. ಅವುಗಳು ಸಮಾಜಮುಖಿ ಮತ್ತು ಮಾನವೀಯತೆಯ ನೆಲೆಗಟ್ಟನ್ನೂ ಒಳ ಗೊಂಡಿದೆ ಎಂದು ಇಸ್ರೊ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಹೇಳಿದರು.

ಬೆಂಗಳೂರಿನಲ್ಲಿ ಬಾಹ್ಯಾಕಾಶ ಮತ್ತು ಉಪಗ್ರಹ ಸಂವಹನಕ್ಕೆ ಸಂಬಂಧಿಸಿದ ದೇಶದ ಏಕೈಕ ಪ್ರದರ್ಶನ 'ಬೆಂಗಳೂರು ಸ್ಪೇಸ್ ಎಕ್ಸ್‌ಪೊ'ದ 4ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಬುಧವಾರ ಮಾತನಾಡಿದ ಅವರು, ''ಬಾಹ್ಯಾಕಾಶ ಕಾರ್ಯಕ್ರಮಗಳು ರಾಷ್ಟ್ರವ್ಯಾಪಿಯಾಗಿ ಮಹತ್ವ ಪಡೆದುಕೊಳ್ಳುತ್ತಿದೆ ಎಂಬುದಕ್ಕೆ ಇಸ್ರೊದ ಮಂಗಳಯಾನದ ಯಶಸ್ಸಿಗೆ ಸಿಕ್ಕಿದ ಅಭೂತಪೂರ್ವ ಜನಸ್ಪಂದನೆ ಸಾಕ್ಷಿ. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಬಾಹ್ಯಾಕಾಶದ ಬಗ್ಗೆ ಅತೀವ ಕುತೂಹಲ ಮೂಡಿಸುವಲ್ಲಿ ಇಸ್ರೊ ಕಾರ್ಯಕ್ರಮಗಳು ಉತ್ತೇಜಿಸಿವೆ'' ಎಂದರು.



ಬೆಂಗಳೂರಿನಲ್ಲಿ ಬುಧವಾರ 4ನೇ ಬೆಂಗಳೂರು ಬಾಹ್ಯಾಕಾಶ ಎಕ್ಸ್‌ಪೋ ಉದ್ಘಾಟನಾ ಸಮಾರಂಭದಲ್ಲಿ ಇಸ್ರೊ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಭಾಗವಹಿಸಿದ್ದರು.

''ಇಸ್ರೊ ಯೋಜನೆಗಳಿಂದ ನೂರಾರು ಉದ್ದಿಮೆಗಳು ಬೆಳೆಯುತ್ತಿದ್ದು, ಸಮಕಾಲೀನ ಅಗತ್ಯಗಳಿಗೆ ಇಲ್ಲಿ ನಡೆಯು ತ್ತಿರುವ ಉಪಗ್ರಹ ಸಂಶೋಧನೆಗಳು ನೆರವಾಗುತ್ತಿವೆ. ಬಾಹ್ಯಾಕಾಶವನ್ನು ಶಾಂತಿ ಯುತ ಉದ್ದೇಶಗಳಿಗೆ ಬಳಕೆ ಮತ್ತು ಅಂತಾರಾಷ್ಟ್ರೀಯ ಸಹಕಾರ ಅಭಿವೃದ್ಧಿ ಯಲ್ಲಿ ಇಸ್ರೋ ಸಾಧನೆಗೆ ಇದೀಗ ಇಂದಿರಾ ಗಾಂಧಿ ಪ್ರಶಸ್ತಿ ಒಲಿದಿದೆ. ಭಾರತ ಉಪಗ್ರಹ ಉಡಾವಣಾ ಸೌಲಭ್ಯಗಳನ್ನು ಒದಗಿಸುವಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿ ಗಳಿಸುತ್ತಿದೆ. ಅಸೀಮ ವೇಗ, ಕೌಶಲ್ಯ, ತಂತ್ರಜ್ಞಾನದ ಪರಿಣಾಮ ಇದು ಸಾಧ್ಯವಾಗಿದೆ'' ಎಂದು ರಾಧಾಕೃಷ್ಣನ್ ತಿಳಿಸಿದರು.

''ಆಂಧ್ರ ಪ್ರದೇಶದಲ್ಲಿ ಇತ್ತೀಚೆಗೆ ಹುಡ್ ಹುಡ್ ಚಂಡಮಾರುತ ಅಪ್ಪಳಿಸಿದ ಸ... ರ್ಭದಲ್ಲಿ ಉಪಗ್ರಹ ತಂತ್ರಜ್ಞಾನ ... ನಿಂದ ಚಂಡಮಾರುತದ ಚಲನವಲ... ಬಗ್ಗೆ ಮುಂಚಿತವಾಗಿಯೇ ಮಾ... ಲಭ್ಯವಾಗಿತ್ತು. ಇದರ ಪರಿಣಾಮ ಸ... ದಲ್ಲಿ ಪರಿಹಾರ ಕ್ರಮಗಳನ್ನು ತೆ... ಕೊಳ್ಳಲು ಮತ್ತು ಜೀವಹಾನಿಯನ್ನು ... ಮೆ ಮಾಡಲು ಸಾಧ್ಯವಾಗಿತ್ತು'' ಎ... ಬಾಹ್ಯಾಕಾಶ ಯೋಜನೆಗಳ ಮಾನವೀ... ಉದ್ದೇಶಗಳನ್ನು ಅವರು ವಿವರಿಸಿದರು.

''ಮಂಗಳಯಾನ ಸಫಲವಾದ ನಂ... ಇಸ್ರೊ ಮತ್ತು ನಾಸಾ ಮಂಗಳ ಗ್ರಹ... ಜಂಟಿಯಾಗಿ ಸಂಶೋಧನೆಗಳನ್ನು ಮ... ದುವರಿಸಲು ಅನುಕೂಲವಾಗುವ... ಕಾರ್ಯಪಡೆ ರಚಿಸಲಾಗುತ್ತಿದೆ. ಉಭ... ರಾಷ್ಟ್ರಗಳ ಬಾಂಧವ್ಯ ಮತ್ತು ಅಂ... ರಾಷ್ಟ್ರೀಯ ಸಹಕಾರ ವೃದ್ಧಿಗೆ ಇ... ಪೂರಕವಾಗಿದೆ '' ಎಂದರು.

ಸಿಐಐ ಸಹಭಾಗಿತ್ವದಲ್ಲಿ ಆಯೋ... ವಾಗಿರುವ ಬೆಂಗಳೂರು ಬಾಹ್ಯಾಕ... ವಸ್ತು ಪ್ರದರ್ಶನ ನವೆಂಬರ್ 21ರ ತ... ನಗರದ ತುಮಕೂರು ರಸ್ತೆಯಲ್ಲಿರು... ಬಿಐಇಸಿಯಲ್ಲಿ ನಡೆಯಲಿದೆ.

# ಎಸ್‌ಬಿಐ ನೇಮಕಾತಿ ಮಾಹಿತಿ

**ವಿಕ ಸುದ್ದಿಲೋಕ** ಬೆಂಗಳೂರು

**ದೇ**ಶದ ಅತ್ಯಂತ ದೊಡ್ಡ ಬ್ಯಾಂಕ್‌ಗಳಲ್ಲಿ ಒಂದಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ತನ್ನ ಅಸೋಸಿಯೇಟ್ ಬ್ಯಾಂಕುಗಳಿಗೆ 6,425 ಕ್ಲೆರಿಕಲ್ ಕೇಡರ್ ಹುದ್ದೆಗಳಿಗೆ ಹಾಗೂ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) 22ಕ್ಕೂ ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿಗಾಗಿ 'ಸ್ಪೆಷಲಿಸ್ಟ್ ಆಫೀಸರ್' ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿವೆ. ಈ ಬಗ್ಗೆ ಮಾಹಿತಿ ಹೊತ್ತು ಈ ವಾರದ **career vk** ಇದೇ ಶುಕ್ರವಾರ ಮಾರುಕಟ್ಟೆ ಪ್ರವೇಶಿಸುತ್ತಿದೆ.

ಈ ನೇಮಕಾತಿ ಮೂಲಕ ಎಸ್‌ಬಿಐನ ಅಸೋಸಿಯೇಟ್ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ) 725 ಕ್ಲರ್ಕ್‌ಗಳನ್ನು ನೇಮಕ ಮಾಡಿಕೊಳ್ಳಲಿದೆ. ಅಲ್ಲದೆ, ರಾಜ್ಯದಲ್ಲಿ ಕಾರ್ಯನಿರ್ವಹಿಸಲು, ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ-6, ಸ್ಟೇಟ್ ಬ್ಯಾಂಕ್ ಆಫ್ ತಿರುವಂಕೂರು-60, ಸ್ಟೇಟ್ ಬ್ಯಾಂಕ್ ಆಫ್ ಬಿಕ್ನೇರ್ ಆ್ಯಂಡ್ ಜೈಪುರ್-9 ಮತ್ತು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್-220 ಮಂದಿಯನ್ನು ನೇಮಿಸಿಕೊಳ್ಳಲಿವೆ.

ಐಬಿಪಿಎಸ್ ಈ 'ಸ್ಪೆಷಲಿಸ್ಟ್ ಆಫೀಸರ್' ನೇಮಕಾತಿ ಪ್ರಕ್ರಿಯೆ ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸ್ಕೇಲ್-ಐ ಕ್ಕೆ ಒಳಪಡುವ ಐ.ಟಿ. ಆಫೀಸರ್, ಅಗ್ರಿಕಲ್ಚರ್ ಫೀಲ್ಡ್ ಆಫೀಸರ್, ರಾಜ್ಯ ಭಾಷಾ ಅಧಿಕಾರಿ, ಲಾ ಆಫೀಸರ್, ಎಚ್‌ಆರ್/ಪರ್ಸನಲ್ ಆಫೀಸರ್ ಮತ್ತು ಮಾರ್ಕೆಟಿಂಗ್ ಆಫೀಸರ್ ಹುದ್ದೆಗಳಿಗೆ ನೇಮಕವಾಗುವ ಅವಕಾಶ ಕಲ್ಪಿಸಲಿದೆ. ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಚಿಕೆಯಲ್ಲಿ ನೀಡಲಾಗಿದೆ.

ವಿಜಯ ಕರ್ನಾಟಕದ ಸಹೋದರ ಪತ್ರಿಕೆಯಾದ ವಿಜಯ**next**ನೊಂದಿಗೆ ಉಚಿತವಾಗಿ ದೊರೆಯಲಿರುವ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಿಯಾದ **career vk**ಯಲ್ಲಿ, ಕರ್ನಾಟಕ ಹೈಕೋರ್ಟ್, ಎಚ್‌ಎಎಲ್, ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿ, ಕರಾವಳಿ ಭದ್ರತಾ ಪಡೆ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಖಾಲಿ ಇರುವ ಉದ್ಯೋಗಗಳ ಮಾಹಿತಿ ನೀಡಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗ ಸದ್ಯವೇ ಕೆಎಎಸ್ ಅಧಿಕಾರಿಗಳ ನೇಮಕ ಪ್ರಕ್ರಿಯೆಯನ್ನು ಆರಂಭಿಸಲಿದ್ದು, ಮುಖ್ಯ ಪರೀಕ್ಷೆಗೆ ಯಾವೆಲ್ಲ ವಿಷಯ ಓದಿಕೊಳ್ಳಬೇಕೆಂದು ಮಾಹಿತಿ ನೀಡುವ ಲೇಖನ ಪ್ರಕಟವಾಗಿದೆ. ಇಷ್ಟೇ ಅಲ್ಲದೆ, ಪ್ರಸ್ತುತ ವಿದ್ಯಮಾನಗಳ ಮಾಹಿತಿ ನೀಡುವ, ವಿಜ್ಞಾನ-ಸಂಶೋಧನೆಗಳ ಮೇಲೆ ಬೆಳಕು ಚೆಲ್ಲುವ, ಸಾಮಾನ್ಯ ಜ್ಞಾನ ಹೆಚ್ಚಿಸುವ ಪುಟಗಳೂ ಇವೆ.

**Career vk**

**ವಿಜಯ next ಪ್ರತಿ ಶುಕ್ರವಾರ ಮಾರುಕಟ್ಟೆಯಲ್ಲಿ ದೊರೆಯಲಿದ್ದು, ಇದರೊಂದಿಗೆ 8 ಪುಟಗಳ career vk ಉಚಿತವಾಗಿ ಓದುಗರಿಗೆ ಲಭ್ಯವಾಗಲಿದೆ. ಓದುಗರು ವಿಜಯ next ಮತ್ತು career vk ಸಂಚಿಕೆ ಪಡೆಯಲು ದೂರವಾಣಿ ಸಂಖ್ಯೆ 080-40877533 ಸಂಪರ್ಕಿಸಬಹುದು.**





ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ

ಕರ್ನಾಟಕ ಸರ್ಕಾರ

**ಸರ್ವ ಶಿಕ್ಷಣ ಅಭಿಯಾನ ಸಮಿತಿ - ಕರ್ನಾಟಕ**

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-560 001

ಸಂಖ್ಯೆ : ಸ.ಶಿ.ಅ./ಸಂ.ಮೌ/PINDICS/2014-15 ದಿನಾಂಕ : 20.11.2014

**ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳ ನಮೂನೆಯನ್ನು ಮುದ್ರಣ ಹಾಗೂ ಸರಬರಾಜು ಕಾರ್ಯಕ್ಕೆ ಕೊಟೇಶನ್ ಆಹ್ವಾನಿಸುವ ಬಗ್ಗೆ**

2014-15ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳ ನಮೂನೆಯನ್ನು ಮುದ್ರಣ ಹಾಗೂ ಸರಬರಾಜು ಮಾಡಲು ಕೊಟೇಶನ್ ಮೂಲಕ ಮುದ್ರಕರಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

- ವಾರ್ಷಿಕ ವರದಿಗೆ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಎರಡು ಲಕೋಟೆಗಳಲ್ಲಿ ಸಲ್ಲಿಸಲು ತಿಳಿಸಿದೆ.
- ಕೊಟೇಶನ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಇಲಾಖೆಯ ವೆಬ್‌ಸೈಟ್**www.schooleducation.kar.nic.in** & **www.ssakarnataka.gov.in**ನಿಂದ ಪಡೆಯಬಹುದು.
- ಕೊಟೇಶನ್ ಸಲ್ಲಿಸಬೇಕಾದ ವಿಳಾಸ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ, ಹೊಸ ಸಾರ್ವಜನಿಕ ಕಛೇರಿ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-01.
- ಕೊಟೇಶನ್ ಸಲ್ಲಿಸಲು ಕೊನೆಯ ದಿನಾಂಕ: 29-11-2014ರ ಸಂಜೆ 4.30ರೊಳಗೆ ಸಲ್ಲಿಸುವುದು.

ಸಹಿ/- ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವಶಿಕ್ಷಣ ಅಭಿಯಾನ-ಕರ್ನಾಟಕ, ಬೆಂಗಳೂರು.